1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**1101/2025**

| | |
|---|---|
| ಹೆಸರುಃ ರಂಗಸ್ವಾಮಿ | ಚಾಸಾಃ 1 |
| ತಂದೆಃ ಲೇಟ್ ರಾಮಪ್ಪ | ಪ್ರಾಸಾ: 1 |

ವಯಸ್ಸುಃ 25 ವರ್ಷ

ಉದ್ಯೋಗಃ ಹಮಾಲಿ ಕೆಲಸ

ವಾಸ ಸ್ಥಳಃ ಕೆ ರಾಮಗೊಂಡನಹಳ್ಳಿ ಗ್ರಾಮ, , ಚನ್ನಗಿರಿ ತಾ.

ಸಾಕ್ಷಿಗೆ ದಿನಾಂಕಃ 04-12-2025ರಂದು ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-16 ನನ್ನ ದೊಡ್ಡಪ್ಪ , ಚಾಸಾ-17 ಮತ್ತು 18 ನನ್ನ ಅಣ್ಣಂದಿರು. ಮೃತ ರಾಮಪ್ಪ ನನ್ನ ತಂದೆ.

2024ರ ಫೆಬ್ರವರಿ ತಿಂಗಳಿನಲ್ಲಿ ನನ್ನ ತಂದೆ ಬೈಕ್‌ನಲ್ಲಿ ಚನ್ನಗಿರಿ ಠಾಣೆಯಲ್ಲಿ ಕೆಲಸ ಮುಗಿಸಿಕೊಂಡು ನಮ್ಮ ಊರಿಗೆ ಹಿಂದಿರುಗುತ್ತಿರುವಾಗ ಆಗ ಗುಳ್ಳಹಳ್ಳಿ ಬಳಿ ಎಡಗಡೆಯಿಂದ ಬಂದ ಇನ್ನೊಂದು ಬೈಕ್ ನಮ್ಮತಂದೆ ಚಲಾಯಿಸುತ್ತಿದ್ದ ಬೈಕಿ ಗೆ ಅಪಘಾಪಡಿಸಿರುತ್ತದೆ. ಸದರಿ ಬೈಕ್ ನಂ ನನಗೆ ನೆನಪಿಲ್ಲ. ನನ್ನ ತಂದೆ ಬೈಕಿನಿಂದ ಬಿದ್ದ ತಕ್ಷಣ ಒಂದು ಲಾರಿ ಬಂದು ನನ್ನ ತಂದೆಯ ಮೇಲೆ ಹಾದು ಹೋಗಿರುತ್ತದೆ. ಸದರಿ ಅಪಘಾತದಿಂದ ನನ್ನ ತಂದೆಯ ದೇಹ ಪೂರ್ಣವಾಗಿ ಛಿದ್ರವಾಗಿ ಸ್ದಳದಲ್ಲಿಯೇ ಮೃತಪಟ್ಟಿರುತ್ತಾರೆ. ಸದರಿ ವಿಚಾರವನ್ನು ನನಗೆ ಚಾಸಾ-17ರವರು ಫೋನ್ ಮಾಡಿ ತಿಳಿಸಿರುತ್ತಾರೆ. ನಂತರ ಸದರಿ ವಿಚಾವಾಗಿ ನಾನು ಠಾಣೆಗೆ ಹಾಜರಾಗಿ ದೂರನ್ನು ದಾಖಲಿಸಿರುತ್ತೇನೆ.

ಸಾಕ್ಷಿ ಕಡತದಲ್ಲಿನ ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದೂರಿನಲ್ಲಿ ನಾನು ಸದರಿ ಲಾರಿ ಚಾಲಕನ ವಿರುದ್ದ ಕ್ರಮ ಕೈಗೊಳ್ಳುವಂತೆ ನಮೂದಿಸಿರುತ್ತೇನೆ.

ನಾನು ನೀಡಿದ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಪರಿಶೀಲನೆಗಾಗಿ 2-3ದಿನಳ ನಂತರ ಬಂದು ಸ್ಥಳ ಮಹಜರನ್ನು ಜರುಗಿಸಲು ಬಂದಿರುತ್ತಾರೆ. ಸದರಿಯವರು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-6 ಮತ್ತು 7 ರವರ ಸಮಕ್ಷಮ ಮಹಜರನ್ನು ಜರುಗಿಸಿರುತ್ತಾರೆ.

ಸಾಕ್ಷಿ ಕಡತದಲ್ಲಿನ ಸದರಿ ಸ್ಥಳ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ-2 ಕ್ಕೆ ನನ್ನ ಜೊತೆ ಚಾಸಾ-6 ಮತ್ತು 7 ರವರು ಸಹಿ ಮಾಡಿರುತ್ತಾರೆ.

ಮಹಜರ್ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಯಾವುದು ಎಂದು ನನಗೆ ಗೊತ್ತಿಲ್ಲ. ಸರಿದ ದಾಖಲೆ ಕಚ್ಚಾ ನಕಾಶೆಯಾಗಿದ್ದು ಅದನ್ನು ನಿಪಿ-4 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ನನ್ನ ತಂದೆಗೆ ಅಪಘಾತಪಡಿಸಿದ ಲಾರಿ ನಂಬರನ್ನು ನನಗೆ ಹೇಳಲಾಗುವುದಿಲ್ಲ, ನಾನು ಯಾವುದೇ ಮುಂದುವರೆದ ಹೇಳಿಕೆಯನ್ನು ಕೊಟ್ಟಿಲ್ಲ. ಸದರಿ ಲಾರಿ ಚಾಲಕನನ್ನು ನಾನು ನೋಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು ಪಂಚನಾಮೆ ಮತ್ತು ಮುಂದುವರೆದ ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು ಪಂಚನಾಮೆ ಮತ್ತು ಮುಂದುವರೆದ ಹೇಳಿಕೆಗಳನ್ನು ನೋಡಲಾಗಿ ಸಾಕ್ಷಿಯು ದೂರು ಪಂಚನಾಮೆ ಮತ್ತು ಮುಂದುವರೆದ ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 29-02-2024ರ ರಾತ್ರಿ 7.30 ರ ಸಮಯದಲ್ಲಿ ದೇವರಹಳ್ಳಿ-ಗುಳ್ಳಹಳ್ಳಿ ಗ್ರಾಮದ ನಡುವಿನ ರಸ್ತೆಯಲ್ಲಿ ದೇವರಹಳ್ಳಿಕಡೆಯಿಂದ ಎದುರುಗಡೆ ಬಂದ ಬೈಕ್ ನಮ್ಮ ತಂದೆಯ ಬೈಕ್ ಗೆ ಡಿಕ್ಕಿಪಡಿಸಿ ಅಪಘಾತಪಡಿಸಿತು ಎಂದರೆ ಸರಿ. ಅದರಿಂದ ನನ್ನ ತಂದೆ ಬೈಕಿ ಸಮೇತ

ಕೆಳಗೆ ಬಿದ್ದಾಗ ಅವರಿಗೆ ಗಾಯಗಳಾದವು ಎಂದರೆ ಸರಿ. ದಿಃ01-03-2024ರಂದು ನಿಪಿ-1 ರಂತೆ ದೂರು ದಾಖಲಿಸಿದ್ದೆನೆ ಎಂದರೆ ಸರಿ. ನನ್ನದೂರಿನಲ್ಲಿ ನನ್ನ ತಂದೆಗೆ ಅಪಘಾತಪಡಿಸಿದ ಕೆಎ/16-ಇಇ-6996 ಬೈಕ್ ಮತ್ತು ಲಾರಿಯ ಚಾಲಕನ ವಿರುದ್ದ ಕ್ರಮ ಕೈಗೊಳ್ಳುವಂತೆ ದೂರು ನೀಡಿರುತ್ತೇನೆ ಎಂದರೆ ಸರಿ.

ದಿಃ 02-03-2024ರಂದು ಪೊಲೀಸರು ಸ್ಥಳ ಮಹಜರು ಜರುಗಿಸಲು ಬಂದರು ಎಂದರೆ ಸರಿ. ಸದರಿ ಸಮಯಕ್ಕೆ ಹಾಜರಿದ್ದ ಚಾಸಾ-6 ಮತ್ತು 7 ರವರ ಸಹಿಗಳನ್ನು ನಿಪಿ-2 ಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ನಿಪಿ-2ರ ಸಮಯಕ್ಕೆ ನಿಪಿ-4 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ ಅದಕ್ಕೆ ನಮ್ಮ ಸಹಿ ಪಡೆದರು ಎಂದರೆ ಸರಿ.

ದಿಃ22-03-2024ರಂದು ಕುಮಾರ ಎಂಬಾತ ಎದುರುಗಡೆಯಿಂದ ಬೈಕ್ ಚಲಾಯಿಸಿಕೊಂಡು ಬಂದಾಗ ಲಾರಿಬಂದು ಅಪಘಾತಪಡಿಸಿದ ಕುರಿತು ಚಾಸಾ-13 ಮತ್ತು 14 ರವರು ಸ್ಥಳದಲ್ಲಿದ್ದು ಚಾಸಾ-12 ರವರಿಗೆ ತಿಳಿಸಿದರು ಎಂದರೆ ಸರಿ. ಸದರಿಯವರು ಸದರಿ ಲಾರಿ ಸಂಖ್ಯೆಯನ್ನು ಕೆಎ-19/ಎಡಿ-6004 ಬಿಳಿ ಬಣ್ಣದ ಗೂಡ್ಸ್ ಲಾರಿ ಎಂದುತಿಳಿಸಿದರು ಎಂದರೆ ಸರಿ. ಸದರಿ ದಿನದಂದು 1ನೇ ಅರೋಪಿಯಾದ ಜಯರಾಮ ಎಂಬಾತ ಸದರಿ ಲಾರಿಯನ್ನು ಚಲಾಯಿಸುತ್ತಿದ್ದು ಆತನನ್ನು ನನಗೆ ಪೊಲೀಸ್ ಠಾಣೆಯಲ್ಲಿ ತೋರಿಸಿದರು ಎಂದರೆ ಸರಿಯಲ್ಲ.ಸಾಕ್ಷಿಯ ಅಲ್ಲಗಳೆದ ಹೇಳಿಕೆಯನ್ನು ನಿಪಿ- 5 ಎಂದು ಗುರುತಿಸಲಾಯಿತು. ನನ್ನ ತಂದೆಗೆ ಅಪಘಾತಪಡಿಸಿದ ಲಾರಿ ಮತ್ತು ಬೈಕ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಕಡತದಲ್ಲಿನ ದಿಃ 02-03-2024ರಂದು ವಾಹನ ತಡೆ ಪಂಚನಾಮೆ ಸಮಯದಲ್ಲಿ ತೆಗೆದ ಪೊಟೋದಲ್ಲಿನ ಬೈಕ್ ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೊಟೋವನ್ನು ನಿಪಿ-6 ಎಂದು ಗುರುತಿಸಲಾಯಿತು. ದಿಃ 22-03-2024ರಂದು ವಾಹನ ತಡೆ ಪಂಚನಾಮೆ ಸಮಯದಲ್ಲಿ ತೆಗೆದ ಪೊಟೋದಲ್ಲಿನ ಲಾರಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೊಟೋವನ್ನು ನಿಪಿ-7 ಎಂದು ಗುರುತಿಸಲಾಯಿತು. ಈ ದಿನನ್ಯಾಯಾಲಯದ ಮುಂದೆ ಇರುವ 1ನೇ ಅರೋಪಿಯೇ ತನ್ನ ಲಾರಿಯನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದ ಕಾರಣ ನನ್ನ ತಂದೆ ಅಪಘಾಪಡಿಸಿದ್ದು ಅದರಿಂದ ನನ್ನ ತಂದೆ ಮೃತಪಟ್ಟಿದ್ದು, ಸದರಿ ಆರೋಪಿಯನ್ನು ನನಗೆ ಠಾಣೆಯಲ್ಲಿ ತೋರಿಸಿದ್ದರು ಸಹ ನಾನು ಅರೊಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ಆರ್ ಅರ್ ವಕೀಲರಿಂದ –**

ನಿಪಿ-1ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲದೆ ಇದ್ದರು ಸಹ ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಚನ್ನಗಿರಿ-ದಾವಣಗೆರೆ ರಸ್ತೆ ಹೆದ್ದಾರಿ ರಸ್ತೆ ಎಂದರೆ ಸರಿ. ಸದರಿ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ಹೆಚ್ಚಾಗಿರುತ್ತದೆ ಎಂದರೆ ಸರಿ. ಸದರಿ ದಿನದಂದು ಮುಖಾ ಮುಖಿ ಡಿಕ್ಕಿಯಾದ ಬೈಕ್ ಗಳ ಪೈಕಿ ನನ್ನ ಬೈಕ್ ಹಿರೋ ಸ್ಪ್ಲೆಂಡರ್ ಆಗಿರುತ್ತದೆ. ಸದರಿ ನನ್ನ ಬೈಕ್ 15 ವರ್ಷದ ಹಳೆಯದಾಗಿರುತ್ತದೆ. ಸದರಿ ಬೈಕ್ ನ ನಂಬರ್ ಪ್ಲೇಟ್ ಕಾಣಿಸುತ್ತಿರಲಿಲ್ಲ ಎಂದರೆ ಸರಿ. ಸದರಿ ಬೈಕ್ ನ ಆರ್ ಸಿ ಮತ್ತು ಇನ್ಸೂರೆನ್ಸ್ ನ್ನು ಪೊಲೀಸರಿಗೆ ಹಾಜರುಪಡಿಸಿರುತ್ತೇನೆ. ನಮ್ಮ ಬೈಕ್ ಗೆ ಸದರಿ ಸಮಯಕ್ಕೆ ವಿಮೆ ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿ. ನನ್ನ ತಂದೆಯ ಬೈಕಿಗೆ ಎದರುಗಡೆಯಿಂದ ಬಂದು ಅಪಘಾತಪಡಿಸಿದ ಬೈಕಿಗೂ ಸಹ ವಿಮೆ ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿ. ನಾನು ಅಪಘಾತ ವಿಮಾ ಪರಿಹಾರದ ಹಣವನ್ನು ಪಡೆಯಲು ಈ ಲಾರಿಯ ಮೇಲೆ ಈ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಸದರಿ ಪ್ರಶ್ನೆಯನ್ನು2 ಬಾರಿ ಕೇಳಿದರೂ ಸಹ 2 ಬಾರಿ ಸದರಿ ಉತ್ತರವನ್ನೇ ನೀಡಿರುತ್ತಾರೆ. 1ನೇ ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ.

ನಿಪಿ2 ನ್ನು ಜರುಗಿಸಲು ನಮಗೆ ಯಾವುದೇ ಪೂರ್ವ ನೋಟಿಸನ್ನು ಕೊಟ್ಟಿರಲಿಲ್ಲ ಎಂದರೆ ಸರಿ. ನಿಪಿ-2ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆಸ ರಿ. ನಿಪಿ-2 ಕ್ಕೆ ಬಿಳಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ತದನಂತರ ನಾನು ಎಂದಿಗೂ ಸಹ ಪೊಲೀಸ್ ಠಾಣೆಗೆ ಹಾಜರಾಗಿಲ್ಲ ಎಂದರೆ ಸಾಕ್ಷಿ 15-20 ದಿನಳ ತರುವಾಯ ಪೊಲೀಸರುಕರೆ ಮಾಡಿ ಕರೆಸಿದ್ದರ ಎಂದರೆ ಸರಿ. ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ನಾನು ಅಪಘಾತದಲ್ಲಿ ಮೃತಪಟ್ಟ ನನ್ನ ತಂದೆಯ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಚಲಾಯಿಸುತ್ತಿದ್ದ ಬೈಕ್ ಗೆ ಸದರಿ ಲಾರಿ ಚಾಲಕ ಯಾವುದೇ ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**